ಸಿ.ಸಿ.ನಂಃ **01/2020** ಪಿ.ಡಬ್ಲ್ಯೂ.- **1**

**ದಿನಾಂಕಃ 03.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀಸವಾಲುಃ ಆರೋಪಿಯ ಪರ ಶ್ರೀ. ಎಸ್.ಎ.ಕೆ. ವಕೀಲರಿಂದಃ**

ಆರೋಪಿ ನಿಮಗೆ ಯಾವ ರೀತಿ ಪರಿಚಯ ಎಂದರೆ ನಮ್ಮ ಊರಿನವರೇ ಆದ ಶಿವಾರೆಡ್ಡಿ ಎಂಬುವವರ ಜೊತೆ ಬರುತ್ತಿದ್ದರು. ಟೊಮ್ಯಾಟೋ ಮಾರುಕಟ್ಟೆಯಲ್ಲಿ ನನ್ನದು ಕ್ಯಾಂಟರ್ ಇತ್ತು. ಅಲ್ಲಿ ಪರಿಚಯ ಆಗಿದ್ದರು. ಆರೋಪಿ ನಿಮಗೆ ಎಷ್ಟು ವರ್ಷಗಳಿಂದ ಪರಿಚಯ ಎಂದರೆ **2012** ರಿಂದ ಪರಿಚಯ. ಆರೋಪಿ ಯಾವ ಕೆಲಸ ಮಾಡುತ್ತಾರೆ ಎಂದರೆ ಟೊಮ್ಯಾಟೋ ಮಾರುಕಟ್ಟೆಯಲ್ಲಿ ಬಾಕ್ಸ್ ಹೊರುವ ಕೆಲಸ ಮಾಡುತ್ತಾರೆ. ಆರೋಪಿಗೆ **1** ದಿನಕ್ಕೆ ಎಷ್ಟು ಸಂಬಳ ಬರುತ್ತದೆ ಎಂದು ಗೊತ್ತಾ ಎಂದರೆ ಗೊತ್ತಿಲ್ಲ. ಆರೋಪಿಗೆ ನಿಮಗೆ ಯಾವ ದಿನಾಂಕದಂದು ಬಂದು ದುಡ್ಡು ಕೇಳಿರುತ್ತಾರೆ ಎಂದರೆ **2019** ನೇ ಇಸವಿಯಲ್ಲಿ ಕೇಳಿರುತ್ತಾರೆ. ದಿನಾಂಕ ಗೊತ್ತಿಲ್ಲ. ಎಲ್ಲಿಗೆ ಬಂದು ಹಣ ಕೇಳಿರುತ್ತಾರೆ ಮಾರುಕಟ್ಟೆಯಲ್ಲಿ ಕೇಳಿರುತ್ತಾರೆ. ಆಗ ಜೊತೆಯಲ್ಲಿ ಯಾರು ಇದ್ದರು ಎಂದರೆ ನಾನು ಒಬ್ಬನೇ ಇದ್ದೆ. ಅವರು ಒಬ್ಬರೇ ಬಂದಿರುತ್ತಾರೆ. ಎಷ್ಟು ಹಣ ಕೇಳಿರುತ್ತಾರೆ ಎಂದರೆ **5** ಲಕ್ಷ ಕೇಳಿರುತ್ತಾರೆ. ನೀವು ಯಾವಾಗ ಹಣ ಕೊಟ್ಟಿರುತ್ತೀರಾ ಎಂದರೆ ದಿಃ **14.01.2019** ಕೊಟ್ಟಿರುತ್ತೇನೆ. ಕೇಳಿದ ತಕ್ಷಣ ಕೊಟ್ಟಿರುತ್ತೀರಾ ಎಂದರೆ ಮೊದಲು ಕೇಳಿದರು ನಂತರ ಕೊಟ್ಟಿರುತ್ತೇನೆ. ನಗದು ಹಣ ಕೊಟ್ಟಿರುತ್ತೀರಾ ಎಂದರೆ ಹೌದು. ಸದರಿ ಹಣವನ್ನು ಎಲ್ಲಿ ಕೊಟ್ಟಿದ್ದಿರಿ ಎಂದರೆ ಆರೋಪಿಯ ಊರಾದ ಯಲವಗುಂಟೆ ಊರಿನಲ್ಲಿ ಕೊಟ್ಟಿರುತ್ತೇನೆ. ಅವರ ಮನೆಯಲ್ಲೆ ಕೊಟ್ಟಿರುತ್ತೀರಾ ಎಂದರೆ ಮನೆಯಲ್ಲಿ ಕೊಟ್ಟಿಲ್ಲ ಊರಿನ ಪಕ್ಕದಲ್ಲಿ

ಬಂದಿದ್ದರು ಕೊಟ್ಟಿರುತ್ತೇನೆ. ಯಲವಗುಂಟೆ ಊರಿಗೆ ಪ್ರವೇಶ ಆಗುವ ಜಾಗದಲ್ಲಿ ಕೊಟ್ಟಿರುತ್ತೇನೆ. ಯಾವ ರೀತಿ ನಿಮ್ಮ ಬಳಿ ಹಣ ಇತ್ತು ಎಂದರೆ ಸಾಕ್ಷಿ ಕ್ಯಾಂಟರ್ ಮಾರಿದ ಹಣ ನನ್ನ ಬಳಿ ಮನೆಯಲ್ಲಿ ಇತ್ತು ಅದನ್ನು ತೆಗೆದುಕೊಂಡು ಕೊಟ್ಟಿದ್ದೆ. ಆ ರೀತಿ ನಿಮ್ಮ ಲೀಗಲ್ ನೋಟಿಸಿನಲ್ಲಿ ಹೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಆರೋಪಿಗೆ ಕಷ್ಟ ಇತ್ತು ಎಂದು ಕೊಟ್ಟಿರುತ್ತೇನೆ. ಪ್ರಕರಣ ದಾಖಲು ಮಾಡುವಾಗ ತೊಂದರೆ ಇತ್ತು ಕೊಡುತ್ತಾರೆ ಎಂದು ಕೊಟ್ಟಿರುತ್ತೇನೆ ಎನ್ನುತ್ತಾರೆ. ಜನವರಿ 14 ಸದರಿ ದಿನದಂದು ಹಬ್ಬ ಇತ್ತಾ ಎಂದರೆ ಇರಬಹುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಹಬ್ಬದ ದಿನವೇ ಹಣ ಕೊಟ್ಟಿರುತ್ತೀರಾ ಎಂದರೆ ಹೌದು.

ಮರು ವಿಚಾರಣೆಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.